# ಮೈಸೂರು ವಿಧಾನ ಸಭೆ

# MYSORE LEGISLATIVE ASSEMBLY

*Saturday, 25th March 1972*

The House met in the Assembly Chamber, Vidhana Soudha, at Eleven of the Clock.

MADAM SPEAKER (Smt. K. S. NAGARATHNAMMA) in the Chair.

(Sri Anna Rao Veerabhadrappa (Aland) took oath or made the affirmation in the Chambers of the Speaker)

---

## Papers relating to the Business of the House to be made available in Kannada Etc.

ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಮಾನ್ಯ ಸಭಾಪತಿಯವರೇ, ನಾನು ತಮಗೆ ಶಾಸನ ಸಭಾ ನಡವಳಿಕೆಗಳ ರೂಲ್ 51ರ ಪ್ರಕಾರ ಒಂದು ನೋಟೀಸನ್ನು ಕೊಟ್ಟಿದ್ದೇನೆ. ಅದರ ಬಗ್ಗೆ ನನಗೆ ಎರಡು ಮಾತುಗಳನ್ನಾಡುವುದಕ್ಕೆ ತಾವು ಅವಕಾಶ ಮಾಡಿ ಕೊಡಬೇಕೆಂದು ಕೇಳಿ ಕೊಳ್ಳುತ್ತೇನೆ.

ಅಧ್ಯಕ್ಷರು.—ಆ ವಿಚಾರವನ್ನು ಆಮೇಲೆ ನೋಡೋಣ. ಈಗ ಕೆಲವು ಸಂತಾಪ ಸೂಚನೆಗಳನ್ನು ಮಾಡಬೇಕಾಗಿದೆ.

ಶ್ರೀ ಟಿ. ಆರ್. ಶಾಮಣ್ಣ.—ಅದಕ್ಕೆ ಸೋಮವಾರವಾದರೂ ಅವಕಾಶ ಮಾಡಿಕೊಡುತ್ತೀರಾ?

ಅಧ್ಯಕ್ಷರು.—ನೋಡೋಣ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ).—ಅಧ್ಯಕ್ಷರೇ, ನಮಗೆ ಇಲ್ಲಿ ಒದಗಿಸಿಕೊಟ್ಟಿರತಕ್ಕ ಶಾಸನಸಭಾ ನಡವಳಿಕೆಗಳ ಕಾಗದ ಪತ್ರಗಳೆಲ್ಲಾ ಇಂಗ್ಲೀಷಿನಲ್ಲಿವೆ. ಅವುಗಳನ್ನು ನಮಗೆ ಕನ್ನಡದಲ್ಲಿ ಒದಗಿಸಿಕೊಡುವಂತೆ ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ಅಧ್ಯಕ್ಷರು.—ಹಾಗೇ ಆಗಲಿ. ಅವುಗಳನ್ನು ಕನ್ನಡದಲ್ಲೇ ಕೊಡುವಂತೆ ಏರ್ಪಾಡನ್ನು ಮಾಡೋಣ.

ಶ್ರೀ ಕಾಗೋಡು ತಿಮ್ಮಪ್ಪ.—ಕೊಡುವುದಕ್ಕೆ ಏರ್ಪಾಡು ಮಾಡೋಣ ಎಂದರೆ ಅದು ಒಂದು ಗಂಭೀರವಾದ ಮಾತಾಯಿತು.

ಅಧ್ಯಕ್ಷರು.—ಅಧ್ಯಕ್ಷರಿಂದ ಬರತಕ್ಕ ಉತ್ತರಗಳು ಗಂಭೀರವಾಗೇ ಇರಬೇಕು.

ಶ್ರೀ ಕಾಗೋಡು ತಿಮ್ಮಪ್ಪ.—ನಾನು ಕೇಳಿರತಕ್ಕ ಪ್ರಶ್ನೆ ಕೂಡ ಗಂಭೀರವಾದದ್ದೇ.....

MADAM SPEAKER.—We will see to it.

ಶ್ರೀ ಟಿ. ಆರ್. ಶಾಮಣ್ಣ.—ನನ್ನ ಅರಿಕೆಯ ಬಗ್ಗೆ ತೀರ್ಮಾನವೇನಾಯಿತು?

ಅಧ್ಯಕ್ಷರು.—ಅದನ್ನು ಸೋಮವಾರ ನೋಡೋಣ.